ಸರ್ಕಾರದ ಅಧೀನದಲ್ಲಿರುವ ಕೈಗಾರಿಕೆಗಳ ಬಗ್ಗೆ

೧೦೨ (೨೨೬) ಶ್ರೀ ವೇದಾಂತ ಹೆಬ್ಬಿಗೆ (ಕೃಷ್ಣರಾಜ).—ಮಾನ್ಯ ಸಣ್ಣ ಕೈಗಾರಿಕೆಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

(ಅ) ಸರ್ಕಾರದ ಅಧೀನದಲ್ಲಿರುವ ಕಾರ್ಖಾನೆಗಳು ಎಷ್ಟು ಮತ್ತು ಇವುಗಳಲ್ಲಿ ಸರ್ಕಾರದವರು ಹೂಡಿರುವ ಬಂಡವಾಳ ಎಷ್ಟು ?

(ಆ) ಕಳೆದ ಮೂರು ವರ್ಷಗಳಿಂದ ಈ ಕಾರ್ಖಾನೆಗಳಲ್ಲಿ ಯಾವ ಯಾವ ಕಾರ್ಖಾನೆ ಲಾಭ ಮಾಡಿದೆ ಮತ್ತು ಯಾವ ಯಾವ ಕಾರ್ಖಾನೆಗಳಿಗೆ ನಷ್ಟವುಂಟಾಗಿದೆ ಲಾಭ-ನಷ್ಟದ ಪೊತ್ತವೆಷ್ಟು ?

(ಇ) ನಷ್ಟವುಂಟಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಮಂತ್ರಿಗಳು).—

(ಅ) ಸರ್ಕಾರದ ಅಧೀನದಲ್ಲಿರುವ ಕಾರ್ಖಾನೆಗಳ ಸಂಖ್ಯೆ ೧೯.
ಇವುಗಳಲ್ಲಿ ಸರ್ಕಾರದವರು ಹೂಡಿರುವ ಬಂಡವಾಳ ರೂ. ೧೨೮.೮೪ ಕೋಟಿ.

(ಆ) ಕಳೆದ ಮೂರು ವರ್ಷಗಳಿಂದ ಈ ಕಾರ್ಖಾನೆಗಳು ಮಾಡಿರುವ ಲಾಭ ನಷ್ಟದ ವಿವರ ಅಡಕ ಒಂದರಲ್ಲಿ ಕೊಡಲಾಗಿದೆ.

ವರ್ಷ	ಕೋಟಿ ರೂ. ಗಳಲ್ಲಿ ನಷ್ಟ
೧೯೮೩-೮೪	೨೭.೪೫
೧೯೮೪-೮೫	೩೬.೯೩
೧೯೮೫-೮೬	೪೦.೩೦

(ಇ) ನಷ್ಟಕ್ಕೆ ಕಾರಣಗಳು ಈ ಕೆಳಕಂಡಂತೆ ಇವೆ :

(೧) ರಾಜ್ಯದ ಕೈಗಾರಿಕೆಗಳ ಉತ್ಪನ್ನಗಳಿಗೆ ಅನ್ವಯಿಸುವ ಆಮದು ನೀತಿ ಹಾಗೂ ದರ ನಿಗದಿಗೊಳಿಸುವಿಕೆ.

(೨) ವಿದ್ಯುಚ್ಛಕ್ತಿಯನ್ನು ಅಧಿಕವಾಗಿ ಮಿತಿಗೊಳಿಸುವಿಕೆ ಹಾಗೂ ಸರಬರಾಜು ಆಗುವ ವಿದ್ಯುಚ್ಛಕ್ತಿಗೆ ಹೆಚ್ಚಿನ ದರ ಕೊಡುವಿಕೆ, ಈ ಕಾರಣಗಳಿಂದಾಗಿ ರಾಜ್ಯ ಉತ್ಪನ್ನಗಳ ಬೆಲೆಹೆಚ್ಚಾಗುವುದು ಮತ್ತು ಉತ್ಪನ್ನಗಳು ಕಡಿಮೆಯಾಗುವುದು.

(೩) ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ಉತ್ಪನ್ನಗಳನ್ನು ತಯಾರಿಸಿ ಅವುಗಳನ್ನು ಮಾರಾಟಮಾಡಲು ಶೌಲಭ್ಯಗಳು ಇಲ್ಲದೇ ಇರುವ ಕಾರಣ ತುಲನಾತ್ಮಕ ಮಾರುಕಟ್ಟೆಯಲ್ಲಿ ರಾಜ್ಯ ಕೈಗಾರಿಕೆಗಳ ಸೋಲು.

(೪) ಉತ್ಪಾದನಾ ಶಕ್ತಿ ಇಲ್ಲದ ವಸ್ತುಗಳ ಮೇಲೆ ಅಧಿಕ ಬಂಡವಾಳ ಹೂಡುವಿಕೆ ಇರುವ ಶಕ್ತಿಸಾಮರ್ಥ್ಯವನ್ನು ಪೂರ್ತಿಯಾಗಿ ಉಪಯೋಗಿಸಿಕೊಳ್ಳಲಾಗದೆ ಇರುವುದು.

(೫) ದುಡಿಯುವ ಬಂಡವಾಳ ಇಲ್ಲದೆ ಇರುವುದು ಹಾಗೂ ಸಕಾಲದಲ್ಲಿ ಈ ಬಂಡವಾಳ ಇಲ್ಲದಿರುವಿಕೆ.

(೬) ಹಳೆಯದಾದ ಯಂತ್ರೋಪಕರಣಗಳ ಉಪಯೋಗಿಸುವಿಕೆಯಿಂದ ಅಧಿಕ ಬೆಲೆಯ ಕೆಳದರ್ಜೆಯ ವಸ್ತುಗಳ ತಯಾರಿಕೆ.

(೭) ಬೇಕಾಗಿರುವುದಕ್ಕಿಂತ ಹೆಚ್ಚಿನ ಉದ್ಯೋಗಿಗಳ ನೇಮಕಾತಿ ಉತ್ಪನ್ನಗಳ ಬೆಲೆಯನ್ನು ಹೆಚ್ಚಿಸುವುದು ಈ ಕಾರಣದಿಂದ ಅವುಗಳ ಬೆಲೆ ಸ್ಪರ್ಧಾತ್ಮಕವಾಗಿ ಇಲ್ಲದಿರುವುದು.

ಅನುಬಂಧ—೧

ಕ್ರಮ ಸಂಖ್ಯೆ	ಕಾರ್ಖಾನೆ ಹೆಸರು	ಬಂಡವಾಳ	ಲಾಭ/ನಷ್ಟ (ಲಕ್ಷ ರೂ.ಗಳಲ್ಲಿ)		
			೧೯೮೫–೮೪	೧೯೮೪–೮೫	೧೯೮೫–೮೬
೧.	ಕರ್ನಾಟಕ ಕಾಂಪೋಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್	೩೧.೧೫	೧೦.೫೪	೯.೦೮	—೧೦.೬೨
೨.	ಕರ್ನಾಟಕ ಎಲೆಕ್ಟ್ರಾನಿಕ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್	೩೩೦.೦೦	೧.೮೦	೧.೧೦	೨೮.೭೪
೩.	ಕರ್ನಾಟಕ ಸ್ಟೇಟ್ ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಲಿಮಿಟೆಡ್	೬೭.೬೨	೫೭.೫೭	೬೫.೯೭	೪೯.೭೨
೪.	ಕರ್ನಾಟಕ ಸ್ಟೇಟ್ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಲಿಮಿಟೆಡ್	೯೪೬.೬೭	೩೧ ೦೨	—೨೫೭.೩೦	—೩೪೦.೪೨
೫.	ಕರ್ನಾಟಕ ಆಗ್ರೋಕಾರನ್ ಫ್ರಾಡಕ್ಟ್ಸ್ ಲಿಮಿಟೆಡ್	೫೦.೦೦	೩೬.೪೦	೮೭.೮೮	೯೧.೨೯
೬.	ಮೈಸೂರ್ ಕಾಸ್ಮೆಟಿಕ್ಸ್ ಲಿಮಿಟೆಡ್	೧೦.೦೦	೦.೫೬	೦.೭೨	—೭.೫೪
೭.	ಮೈಸೂರ್ ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್	೧೪೧.೫೦	೬೫.೨೬	—೭೬.೩೩	೭.೪೯
೮.	ಎನ್. ಜಿ. ಇ. ಎಫ್. ಲಿಮಿಟೆಡ್	೭೭೪.೦೦	೩೧.೦೬	೬೯.೯೮	೧೬೩.೪೭
೯.	ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್	೨೪೯.೯೫	೮೭.೪೧	೭೪.೩೫	೪೫.೭೦
೧೦.	ಮೈಸೂರ್ ಲ್ಯಾಂಪ್ ವರ್ಕ್ಸ್	೪೮.೬೮	೮೭.೪೬	೨೧೮.೮೬	೧೫೯.೯೩
೧೧.	ಕರ್ನಾಟಕ ಇಂಪ್ಲಿಮೆಂಟ್ಸ್ ಅಂಡ್ ಮೆಷನರೀಸ್ ಕಂಪನಿ ಲಿಮಿಟೆಡ್	೩೬೮.೮೫	—೧೦೩.೭೧	—೧೪೦.೩೨	—೧೪೦.೮೩
೧೨.	ಕರ್ನಾಟಕ ಸೋಪ್ಸ್ ಅಂಡ್ ಡಿಟರ್‌ಜೆಂಟ್ಸ್ ಲಿಮಿಟೆಡ್	೧೭೬೩.೧೨	—೨೭೮.೭೪	—೩೩೨.೭೫	—೪೯೩.೯೩
೧೩.	ಕರ್ನಾಟಕ ವಿದ್ಯುತ್ ಕಾರ್ಖಾನೆ ಲಿಮಿಟೆಡ್	೧೪೮.೦೦	—೫.೭೪	—೩೪.೮೪	—೫೬.೦೦
೧೪.	ಮೈಸೂರ್ ಷುಗರ್ ಕಂಪನಿ ಲಿಮಿಟೆಡ್	೩೦೦.೨೫	—೧೭೨.೬೩	—೬೨.೮೭	—೧೬೦.೦೦
೧೫.	ಮೈಸೂರ್ ಪೇಪರ್ ಮಿಲ್ಸ್ ಲಿಮಿಟೆಡ್	೩೯೯೩.೨೨	೭೬.೮೭	೧೧೧.೦೫	—೧೮.೬೬
೧೬.	ವಿಶ್ವೇಶ್ವರಯ್ಯ ಐರನ್ ಅಂಡ್ ಸ್ಟೀಲ್ ಲಿಮಿಟೆಡ್	೩೧೪೭ ೦೦	—೨೫೪೪.೩೮	—೩೩೭೬.೩೨	—೩೨೪೦.೭೯
೧೭.	ಮೈಸೂರ್ ಅಸಿಟೇಟ್ ಅಂಡ್ ಕೆಮಿಕಲ್ಸ್ ಲಿಮಿಟೆಡ್	೪೫೫.೫೧	—೫೨.೯೧	೧೮.೫೭	೩೮.೬೬
೧೮.	ಕರ್ನಾಟಕ ಆಗ್ರೋ ಪ್ರೋಟೀನ್ಸ್ ಲಿಮಿಟೆಡ್	೩೩.೭೪	—೫೬.೨೩	—೬೦.೬೦	—೮೯.೯೯
೧೯.	ಕರ್ನಾಟಕ ವೆನೇಯರ್ಸ್ ಲಿಮಿಟೆಡ್	೨೫.೫೦	೩.೫೮	೮.೯೦	೩.೫೮
		೧೨೮೮೪.೭೬	—೨೭೪೫.೮೯	—೩೬೯೩.೦೩	—೪೦೨೯.೭೬